ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕಛೇರಿ ಕೆಲಸದ ವೇಳೆಯನ್ನು ಮಾರ್ಪಡಿಸಿರುವುದು.

216(1163) ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ದಿನಾಂಕ: 02.05.2006ರಂದು ಹೊರಡಿಸಿರುವ ಸುತ್ತೋಲೆ ಸಂಖ್ಯೆ: 1342ರಲ್ಲಿ ಕಛೇರಿ ಕೆಲಸದ ವೇಳೆಯನ್ನು ಈ ಹಿಂದೆ ಕಛೇರಿ ಕೆಲಸದ ವೇಳೆಯನ್ನು ಸೋಮವಾರದಿಂದ ಶುಕ್ರವಾರದವರೆವಿಗೆ ಬೆಳಿಗ್ಗೆ 10.00 ರಿಂದ 17.00 ಗಂಟೆಯವರೆವಿಗೂ ಹಾಗೂ ಪ್ರತಿ ಶನಿವಾರ 10.00 ಗಂಟೆಯಿಂದ 13.30ರವರೆಗೆ ಇದ್ದ ಸಮಯವನ್ನು ಮಾರ್ಪಡಿಸಿ ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 10.00 ಗಂಟೆಯಿಂದ 18.00 ಗಂಟೆಯವರೆಗೆ ಶನಿವಾರ 10.00 ಗಂಟೆಯಿಂದ 13.30ರವರೆಗೆ ನಿಗದಿಪಡಿಸಿರುವುದರಿಂದ ರಾಜ್ಯ ಸರ್ಕಾರದ ಕಛೇರಿ ವೇಳೆಗೆ ವಿರುದ್ಧವಾಗಿಲ್ಲವೇ ಹಾಗೂ ನೌಕರರಿಗೆ ಸಾಯಂಕಾಲ ತೊಂದರೆ ಉಂಟಾಗುವುದಿಲ್ಲವೆ:

ಆ) ಹೌದಾದಲ್ಲಿ, ಈ ಸುತ್ತೋಲೆ ಸಮಯವನ್ನು ಬದಲಾಯಿಸಿ ರಾಜ್ಯ ಸರ್ಕಾರದ ಕಛೇರಿ ಕೆಲಸದ ಸಮಯ ಬೆಳಿಗ್ಗೆ 10.00 ಗಂಟೆಯಿಂದ 17.30 ಗಂಟೆಯವರೆಗೆ ಹಾಗೂ ಪ್ರತಿ ತಿಂಗಳ ಎರಡನೇ ಶನಿವಾರ ರಜೆಯೆಂದು ನಿಗದಿಪಡಿಸಿರುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕಛೇರಿಯ ಕೆಲಸದ ಸಮಯವನ್ನು ಸಹ ರಾಜ್ಯ ಸರ್ಕಾರದ ಕಛೇರಿಗಳಿಗೆ ಅನುಗುಣವಾಗಿ ಮಾರ್ಪಡಿಸಿ ನಿಗದಿಪಡಿಸಲು ಕ್ರಮ ಕೈಗೊಳ್ಳಲಾಗುವುದೆ:

ಇ) ಹಾಗಿದ್ದಲ್ಲಿ, ಎಂದಿನಿಂದ ರಾಜ್ಯ ಸರ್ಕಾರದ ಕಛೇರಿಯ ಸಮಯದಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಹ ನಿಗದಿಪಡಿಸಿ ಜಾರಿಗೆ ತರಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ಕಛೇರಿ ಮತ್ತು ವಿಭಾಗ ಕಛೇರಿಯ ನೌಕರರು ವಾರದಲ್ಲಿ ಒಟ್ಟು 38.30 ಗಂಟೆಗಳಷ್ಟೇ ಕೆಲಸ ನಿರ್ವಹಿಸುತ್ತಿದ್ದು, ಇದು ಕರ್ನಾಟಕ "ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಮತ್ತು ನಿಯಮಗಳ" ಪ್ರಕಾರ ನಿಗದಿಪಡಿಸಿರುವ ವಾರದ ಒಟ್ಟು 48 ಗಂಟೆಗಳ ಅವಧಿಗಿಂತ ಹಾಗೂ ಕರ್ನಾಟಕ ಸರ್ಕಾರದ ಕಛೇರಿಗಳಲ್ಲಿ ನಿಗದಿಪಡಿಸಿರುವ ವಾರದ ಒಟ್ಟು 43.40 ಗಂಟೆಯ ಕೆಲಸದ ಅವಧಿಗಿಂತ ಕಡಿಮೆ ಇದ್ದುದರಿಂದ, ಹೊಸ ವ್ಯವಸ್ಥೆ ಜಾರಿಗೆ ತರಲಾಯಿತು.

ಆ ಮತ್ತು ಇ) ನೌಕರರು ಅನಾನುಕೂಲತೆಯಾಗುತ್ತಿದೆಯೆಂದು ತಿಳಿಸಿದ ಹಿನ್ನಲೆಯಲ್ಲಿ ವಿಷಯವನ್ನು ಪುನರ್‌ಪರಿಶೀಲಿಸಿ, ಸಂಸ್ಥೆಯ ಕೇಂದ್ರ ಕಛೇರಿ, ವಿಭಾಗೀಯ ಕಛೇರಿಗಳ

ಕೆಲಸದ ವೇಳೆಯನ್ನು ದಿನಾಂಕ: 01.7.2006ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಮಾರ್ಪಡಿಸಿ ನಿಗದಿಪಡಿಸಲಾಗಿದೆ. ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 10.00 ರಿಂದ 17.30 ಗಂಟೆಯವರೆಗೆ ಮತ್ತು ಶನಿವಾರ ಬೆಳಿಗ್ಗೆ 10.00 ರಿಂದ 14.00 ಗಂಟೆಯವರೆಗೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಕರ್ನಾಟಕ ಅತ್ಯಾವಶ್ಯಕ ಸೇವೆಗಳು ಮತ್ತು ನಿರ್ವಹಣೆ ಅಧಿನಿಯಮದಡಿ ಅವಶ್ಯಸೇವೆ ಆಗಿರುವುದರಿಂದ ಹಾಗೂ ಸಂಸ್ಥೆಯ ಘಟಕ ಹಾಗೂ ಕಾರ್ಯಾಗಾರಗಳು ಶನಿವಾರದಂದು ಕಾರ್ಯ ನಿರ್ವಹಿಸುವ ಕಾರಣ ಅವುಗಳನ್ನು ನಿಯಂತ್ರಿಸುವ ಕಛೇರಿಗಳು ಸರ್ಕಾರದಲ್ಲಿ ಇರುವ ಪದ್ಧತಿಯಂತೆ ತಿಂಗಳ ಎರಡನೇ ಶನಿವಾರವನ್ನು ರಜೆಯೆಂದು ಘೋಷಿಸಲು ಸಮಂಜಸವಲ್ಲ.

ವಿಷಯ: ಭದ್ರಾವತಿ ಪೊಲೀಸ್ ಠಾಣೆಗಳ ವಾಹನಗಳನ್ನು ಹಿಂದಕ್ಕೆ ಪಡೆದಿರುವುದು

217(934) ಶ್ರೀ ಬಿ.ಕೆ. ಸಂಗಮೇಶ್ವರ್ (ಭದ್ರಾವತಿ) : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿ ತಾಲ್ಲೂಕು/ನಗರ ಪ್ರದೇಶವು ಸೂಕ್ಷ್ಮವಾದ ಪ್ರದೇಶವೆಂದು ಸರ್ಕಾರದ ಗಮನದಲ್ಲಿರುವುದೇ;

ಆ) ಇಲ್ಲಿನ ಘಟನೆಗಳ ವರದಿಗಳನ್ನು ಜಿಲ್ಲಾ ಪೊಲೀಸ್ ಇಲಾಖೆ ಸರ್ಕಾರಕ್ಕೆ ಸಲ್ಲಿಸುವುದಿಲ್ಲವೆ;

ಇ) ಭದ್ರಾವತಿ ತಾಲ್ಲೂಕಿನ ನಗರದ ಪೊಲೀಸ್ ಠಾಣೆಗಳಿಗೆ ನೀಡಲಾಗಿದ್ದ ವಾಹನಗಳ ವ್ಯವಸ್ಥೆಯನ್ನು ವಾಪಸ್ ಪಡೆಯಲು ಗೃಹ ಇಲಾಖೆಯು ಸೂಚನೆ ಆದೇಶ ನೀಡಿರುವುದೇ;

ಈ) ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್, ಶಿವಮೊಗ್ಗರವರು ಭದ್ರಾವತಿ ಪೊಲೀಸ್ ಠಾಣೆಗಳಿಂದ ವಾಹನಗಳನ್ನು ಹಿಂದಕ್ಕೆ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಕಾನೂನು ಮತ್ತು ಶಾಂತಿ ಪಾಲನಾ ದೃಷ್ಟಿಯಿಂದ ಭದ್ರಾವತಿ ತಾಲ್ಲೂಕಿನ/ನಗರದ ಪೊಲೀಸ್ ಠಾಣೆಗಳಿಗೆ ಹಿಂದಿನಂತೆ ವಾಹನಗಳನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಹೌದು.

ಆ) ಹೌದು.